(1)

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಆಗಸ್ಟ್ ೯, ೨೦೧೬ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೫ನೇ ಸಭೆಯ ನಡೆವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | : ಸದಸ್ಯರು |
| ೦೫. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೬. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೭. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೮. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೯. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

ಸಭೆಯಲ್ಲಿ ಅನುಪಸ್ಥಿತರಿದ್ದವರು:

| | |
|---|---|
| ೦೧ ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ: ೦೭.೦೫.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೪ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.(ಅನುಬಂಧ-೦೧)

ದಿನಾಂಕ: ೦೭.೦೫.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೪ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

೧೮೫.೦೧. ದಿನಾಂಕ: ೧೦.೦೬.೨೦೧೬ರಂದು ನಡೆದ ೪ನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣ ಕೋರಿ. (ಮಾಹಿತಿ ಬಂದಿರುತ್ತದೆ)

ನಿರ್ಣಯ : ದಿನಾಂಕ: ೦೭.೦೫.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿ ೧೮೪ನೇ ಸಭೆಯ ನಡೆವಳಿಗಳಿಗೆ ಸಭೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡಿತು.

ದಿನಾಂಕ: ೦೭.೦೫.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿ ೧೮೪ನೇ ಸಭೆಯ ನಡೆವಳಿಗಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

ದಿನಾಂಕ: ೧೦.೦೬.೨೦೧೬ರಂದು ನಡೆದ ಮಂಡಿಸಲಾದ ೪ನೇ ತ್ರೈಮಾಸಿಕ ಹಣಕಾಸು ಸಮಿತಿಯ ಸಭೆಯ ನಡಾವಳಿಗಳಿಗಳನ್ನು ಸಭೆ ಅನುಮೋದಿಸಿತು.

೧೮೫.೦೨. ದಿನಾಂಕ: ೨೦.೦೬.೨೦೧೬ರಂದು ಅಧ್ಯಯನಾಂಗದಲ್ಲಿ ಡೀನ್ ಲಲಿತ ಕಲೆಗಳ ನಿಕಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡೆವಳಿಗಳ ಸ್ಥಿರೀಕರಣ ಕೋರಿ.

೧. ಅಧ್ಯಯನಾಂಗದ ಮೂಲಕ ನಡೆಯುವ ವಿವಿಧ ಕೋರ್ಸ್‌ಗಳ ಪರಿಷ್ಕೃತ ಶುಲ್ಕಗಳ ವಿವರ.

೨. ವಿವಿಧ ಕೋರ್ಸ್‌ಗಳ ಪರಿಷ್ಕೃತ ನಿಯಮಾವಳಿಗಳು.

೩. ಪಿಎಚ್.ಡಿ ಪದವಿ ಅಧಿಸೂಚನೆಗಳು

೪. ನಾಟಕ ಕರ್ನಾಟಕ ರಂಗಾಯಣ, ಮೈಸೂರು ಕೇಂದ್ರಕ್ಕೆ ಮಾನ್ಯತೆ ನೀಡಿರುವ ಕುರಿತು ಘಟನೋತ್ತರ ಅನುಮೋದನೆ ಕೋರಿ.

ನಿರ್ಣಯ : ಮೊದಲ ಎರಡು ವಿಷಯಗಳಿಗೆ ಸಂಬಂಸಿ ದಿನಾಂಕ: ೨೦.೦೬.೨೦೧೬ರಂದು ಅಧ್ಯಯನಾಂಗದಲ್ಲಿ ಡೀನ್ ಲಲಿತ ಕಲೆಗಳ ನಿಕಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳನ್ನು ಸಭೆ ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು. ೩ ಮತ್ತು ೪ನೇ ವಿಷಯಕ್ಕೆ ಸಂಬಂಧಿಸಿದಂತೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

೧೮೫.೦೩. ದಿನಾಂಕ: ೦೧.೦೬.೨೦೧೬ರಂದು ನಡೆದ ಖರೀದಿ ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೦೧.೦೬.೨೦೧೬ರಂದು ನಡೆದ ಖರೀದಿ ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣಕ್ಕೆ ಸಭೆ ಪರಿಶೀಲಿಸಿ ಒಪ್ಪಿಗೆ ನೀಡಿತು.

೧೮೫.೦೪. ದಿನಾಂಕ: ೧೦.೦೬.೨೦೧೬ರಂದು ನಡೆದ ಬೋಧಕ ಮತ್ತು ಬೋಧಕೇತರರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು (ತಿದ್ದುಪಡಿ) ಸಮಿತಿ ಸಭೆಯ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೧೦.೦೬.೨೦೧೬ರಂದು ನಡೆದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು (ತಿದ್ದುಪಡಿ) ಪ್ರತಿಗಳಿಗೆ ಮತ್ತು ಮೇಲ್ದರ್ಜೆಗೆ ಏರಿಸಿದ ಹುದ್ದೆಗಳು ಮತ್ತು ಸೃಜನೆಗೊಂಡ ಹುದ್ದೆಗಳ ಕರಡು ಪ್ರತಿಗಳನ್ನು ಸಭೆ ಪರಿಶೀಲಿಸಿ ಅನುಮೋದನೆ ನೀಡಿತು.

೧೮೫.೦೫. ದಿನಾಂಕ: ೨೯.೦೬.೨೦೧೬ ಮತ್ತು ದಿನಾಂಕ: ೧೩.೦೭.೨೦೧೬ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೨೯.೦೬.೨೦೧೬ ಮತ್ತು ದಿನಾಂಕ: ೧೩.೦೭.೨೦೧೬ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣಕ್ಕೆ ಸಭೆ ಅನುಮತಿ ನೀಡಿತು.

೧೮೫.೦೬. ದಿನಾಂಕ: ೨೦.೦೭.೨೦೧೬ರಂದು ನಡೆದ ಐಕ್ಯೂಎಸಿ ಅನುಷ್ಠಾನ ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೨೦.೦೭.೨೦೧೬ರಂದು ನಡೆದ ಐಕ್ಯೂಎಸಿ ಅನುಷ್ಠಾನ ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣಕ್ಕೆ ಸಭೆ ಒಪ್ಪಿಗೆ ಸೂಚಿಸಿತು.

೧೮೫.೦೭. ದಿನಾಂಕ: ೨೧.೦೭.೨೦೧೬ರಂದು ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೨೧.೦೭.೨೦೧೬ರಂದು ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣಕ್ಕೆ ಸಭೆ ಅನುಮತಿ ನೀಡಿತು.

೧೮೫.೦೮. MRC/MCC (ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣ ಕೇಂದ್ರ) ಯೋಜನೆಗೆ ಯೋಜನಾ ಸಂಯೋಜಕರು ೨೦೧೬–೧೭ನೇ ಸಾಲಿನಲ್ಲಿ ಕಾರ್ಯ ಯೋಜನೆಯ ವರದಿ ಹಾಗೂ ಅನುದಾನಗಳ ಕಾರ್ಯಸೂಚಿಯನ್ನು ಸಲ್ಲಿಸಿದ್ದಾರೆ. ಅನುಮೋದನೆ ಕೋರಿದೆ.

ನಿರ್ಣಯ : MRC/MCC (ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣ ಕೇಂದ್ರ) ಯೋಜನೆಗೆ ಯೋಜನಾ ಸಂಯೋಜಕರು ೨೦೧೬–೧೭ನೇ ಸಾಲಿನಲ್ಲಿ ಕಾರ್ಯ ಯೋಜನೆಯ ವರದಿ ಹಾಗೂ ಅನುದಾನಗಳ ಕಾರ್ಯಸೂಚಿಗೆ ಸಭೆ MRC/MCC, ಅನುದಾನ, ರಾಜ್ಯ ಸರ್ಕಾರದ ಅಥವಾ ಕೋರಿಕೆ ಸಲ್ಲಿಸಿರುವ ಇತರೆ ಸಂಸ್ಥೆಗಳಿಂದ ಅನುದಾನ ಬಂದ ನಂತರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೧೮೫.೦೯. ದಿನಾಂಕ: ೧೬.೦೭.೨೦೧೬ರಂದು ಜಿಲ್ಲಾ ಪಂಚಾಯಿತ್‌ಗೆ ನೂತನವಾಗಿ ಆಯ್ಕೆಯಾಗಿರುವ ಚುನಾಯಿತ ಸದಸ್ಯರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರದ ಅನುಷ್ಠಾನ ಸಮಿತಿ ಸಭೆಯ ನಡಾವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೧೬.೦೭.೨೦೧೬ರಂದು ಜಿಲ್ಲಾ ಪಂಚಾಯಿತ್‌ಗೆ ನೂತನವಾಗಿ ಆಯ್ಕೆಯಾಗಿರುವ ಚುನಾಯಿತ ಸದಸ್ಯರಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರದ ಅನುಷ್ಠಾನ ಸಮಿತಿ ಸಭೆಯ ನಡೆವಳಿಗಳಿಗೆ ಸಭೆ ಅನುಮೋದನೆ ನೀಡಿತು.

೧೮೫.೧೦. ಡಾ. ಎಫ್.ಟಿ. ಹಳ್ಳಿಕೇರಿ, ಸಂಪಾದಕರು ಹಾಲುಮತ ಅಧ್ಯಯನ ಪೀಠದ ದಶಮಾನೋತ್ಸವ ನೆನಪಿನ ಸಂಪುಟವನ್ನು ಸಿದ್ಧಪಡಿಸಲು ವಿವರಗಳುಳ್ಳ ಪರಿವಿಡಿಯನ್ನು ಮಂಡಿಸಿದ್ದಾರೆ. ಅನುಮೋದನೆ ಕೋರಿ.

ನಿರ್ಣಯ : ಡಾ. ಎಫ್.ಟಿ. ಹಳ್ಳಿಕೇರಿ, ಸಂಪಾದಕರು ಹಾಲುಮತ ಅಧ್ಯಯನ ಪೀಠದ ದಶಮಾನೋತ್ಸವ ನೆನಪಿನ ಸಂಪುಟವನ್ನು ಸಿದ್ಧಪಡಿಸಲು ವಿವರಗಳುಳ್ಳ ಪರಿವಿಡಿಯನ್ನು ಮಂಡಿಸಿದ್ದಾರೆ. ಇದಕ್ಕೆ ಸಭೆ ಪ್ರಸಾರಾಂಗದ ನಿಯಮಾನುಸಾರ ಕ್ರಮವಹಿಸಲು ಅನುಮೋದನೆ ನೀಡಿತು.

೧೮೫.೧೧. ೨೦೧೬–೧೭ರ ಶೈಕ್ಷಣಿಕ ಸಾಲಿನಿಂದ ಮಹಿಳಾ ಅಧ್ಯಯನ ಎಂ.ಎ.ಪಿಎಚ್.ಡಿ. ಸಂಯೋಜಿತ ಪದವಿಯನ್ನು ನಡೆಸುವ ಬಗ್ಗೆ.

ನಿರ್ಣಯ : ೨೦೧೬–೧೭ರ ಶೈಕ್ಷಣಿಕ ಸಾಲಿನಿಂದ ಮಹಿಳಾ ಅಧ್ಯಯನ ಎಂ.ಎ.,ಪಿಎಚ್.ಡಿ. ಸಂಯೋಜಿತ ಪದವಿಯನ್ನು ವಿಶ್ವವಿದ್ಯಾಲಯದ ನಿಯಮಗಳನ್ವಯ ನಡೆಸಲು ಸಭೆ ಅನುಮತಿ ನೀಡಿತು.

೧೮೫.೧೨. ಶ್ರೀ ಎಂ.ಪಿ. ಪ್ರಕಾಶ್ ಅಧ್ಯಯನ ಪೀಠ ಸ್ಥಾಪನೆಗೆ ನಿಯಮಾನುಸಾರ ಪ್ರಕ್ರಿಯೆ ಆರಂಭಿಸುವ ಬಗ್ಗೆ.

ನಿರ್ಣಯ : ಶ್ರೀ ಎಂ.ಪಿ. ಪ್ರಕಾಶ್ ಅಧ್ಯಯನ ಪೀಠ ಸ್ಥಾಪನೆಗೆ ನಿಗದಿತ ಅನುದಾನದ ಠೇವಣಿ ಬಂದ ತಕ್ಷಣ ನಿಯಮಾನುಸಾರ ಪ್ರಕ್ರಿಯೆ ಆರಂಭಿಸಲು ಸಭೆ ಒಪ್ಪಿಗೆ ನೀಡಿತು.

೧೮೫.೧೩. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ನೆರವನ್ನು ನೀಡಲು ಆದೇಶಿದ್ದು ಅನುಮೋದನೆ ಕೋರಿದೆ.

ನಿರ್ಣಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ನೆರವಿನ ವಿವರಗಳನ್ನು ಮುಂದಿನ ಡೀನ್ ಸಮಿತಿ ಸಭೆಯಲ್ಲಿ ಚರ್ಚಿಸಿ ಲೋಪದೋಷಗಳಿದ್ದಲ್ಲಿ ಸರಿಪಡಿಸಿ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಹಾಗೂ ಈಗ ಆರ್ಥಿಕ ನೆರವು ನೀಡುತಿರುವುದನ್ನು ಮುಂದುವರೆಸಲು ಸಭೆ ಅನುಮೋದಿಸಿತು.

೧೮೫.೧೪. ವಿವಿಧ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಂಶೋಧನ ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ನೆರವನ್ನು ನೀಡಲು ಆದೇಶಿದ್ದು ಅನುಮೋದನೆ ಕೋರಿದೆ.

ನಿರ್ಣಯ : ವಿವಿಧ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಂಶೋಧನ ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ನೆರವಿನ ವಿವರಗಳನ್ನು ಮುಂದಿನ ಡೀನ್ ಸಮಿತಿ ಸಭೆಯಲ್ಲಿ ಚರ್ಚಿಸಿ ಲೋಪದೋಷಗಳಿದ್ದಲ್ಲಿ ಸರಿಪಡಿಸಿ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಹಾಗು ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಆರ್ಥಿಕ ನೆರವನ್ನು ಮುಂದುವರೆಸಲು ಸಭೆ ಸೂಚಿಸಿತು.

೧೮೫.೧೫. ಬುಡಕಟ್ಟು ಅಧ್ಯಯನ ವಿಭಾಗದ ಸ್ಯಾಪ್ ಬಗ್ಗೆ, ಲೆಕ್ಕ ಪರಿಶೋಧಕರು ನೀಡಿರುವ ಸಲಹೆ. ಯುಜಿಸಿ ಮತ್ತು ಸ್ಯಾಪ್‌ಗೆ ಸಂಬಂಧಿಸಿದಂತೆ ಒಬ್ಬರು ಕೋಆಡಿನೇಟರ್ ನೇಮಿಸುವ ಬಗ್ಗೆ.

ನಿರ್ಣಯ : ಸ್ಯಾಪ್ ಯೋಜನೆ ಮತ್ತು ವಿಶ್ವವಿದ್ಯಾಲಯಕ್ಕೆ ಬರುವ ಇತರೆ ಯೋಜನೆಗಳ ಆಡಳಿತಾತ್ಮಕ ನಿರ್ವಹಣೆಗಾಗಿ ಒಬ್ಬ ಸಂಚಾಲಕರನ್ನು ನೇಮಿಸುವುದು ಮತ್ತು ಆ ಮೂಲಕ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು ಎಂದು ಸಭೆ ಸೂಚಿಸಿತು. ಸಂಚಾಲಕರ ನೇಮಕಾತಿಯನ್ನು ಮಾನ್ಯ ಕುಲಪತಿಗಳಿಗೆ ಬಿಡುವುದೆಂದು ಸಭೆ ನಿರ್ಣಯಿಸಿತು.

೧೮೫.೧೬. ಚಿತ್ರಕಲಾ ವಿದ್ಯಾಲಯಗಳಿಗೆ (INDIAN ART COLLECTION) ನ ೩೦ ಸಂಪುಟಗಳ ೪೨ ಸೆಟ್ ಪುಸ್ತಕಗಳನ್ನು ಖರೀದಿಸುವ ಬಗ್ಗೆ.

ನಿರ್ಣಯ : ಚಿತ್ರಕಲಾ ವಿದ್ಯಾಲಯಗಳಿಗೆ **(INDIAN ART COLLECTION)** ನ ೩೦ ಸಂಪುಟಗಳ ೪೨ ಸೆಟ್ ಪುಸ್ತಕಗಳನ್ನು

ವಿಶ್ವವಿದ್ಯಾಲಯದ ನಿಯಮಗಳನ್ವಯ ಖರೀದಿಗೆ ಕ್ರಮವಹಿಸಲು ಸಭೆ ಒಪ್ಪಿಗೆ ನೀಡಿತು.

೧೮೫.೧೭. ಬಾದಾಮಿ ಕೇಂದ್ರದ ವಾಸ್ತು ಶಿಲ್ಪ ಮತ್ತು ಪ್ರತಿಮಾಶಾಸ್ತ್ರ ವಿಭಾಗದಲ್ಲಿ ತಾತ್ಕಾಲಿಕ ಕನ್ನಡ ಉಪನ್ಯಾಸಕರನ್ನು ನೇಮಕಾತಿ ಮಾಡಲಾಗಿದ್ದು ಘಟನೋತ್ತರ ಅನುಮೋದನೆ ಕೋರಲಾಗಿದೆ.

ನಿರ್ಣಯ : ಬಾದಾಮಿ ಕೇಂದ್ರದ ವಾಸ್ತು ಶಿಲ್ಪ ಮತ್ತು ಪ್ರತಿಮಾಶಾಸ್ತ್ರ ವಿಭಾಗದಲ್ಲಿ ತರಗತಿಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕ ಕನ್ನಡ ಉಪನ್ಯಾಸಕರನ್ನು ನೇಮಕಾತಿ ಮಾಡಲಾಗಿದ್ದು ಅದಕ್ಕೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

೧೮೫.೧೮. ಡಾ. ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ೨೦೧೭-೧೮ನೇ ಸಾಲಿನಲ್ಲಿ USIEF ಸಂಸ್ಥೆಯಿಂದ FULBRIGHT-NEHRU ACADEMIC AND PROFESSIONAL EXCELLENCE (FNAPE) FELLOWSHIP ಯೋಜನೆಯ ಅಧ್ಯಯನಕ್ಕಾಗಿ ಕನಿಷ್ಠ ೪ ರಿಂದ ೯ ತಿಂಗಳವರೆಗೆ ರಜೆ ಮಂಜೂರು ಮಾಡಲು ಅನುಮೋದನೆ ಕೋರಿ.

ನಿರ್ಣಯ : ಡಾ. ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ೨೦೧೭-೧೮ನೇ ಸಾಲಿನಲ್ಲಿ **USIEF** ಸಂಸ್ಥೆಯಿಂದ **FULBRIGHT-NEHRU ACADEMIC AND PROFESSIONAL EXCELLENCE (FNAPE) FELLOWSHIP** ಯೋಜನೆಯ ಅಧ್ಯಯನಕ್ಕಾಗಿ ಕನಿಷ್ಠ ೪ ರಿಂದ ೯ ತಿಂಗಳವರೆಗೆ ರಜೆ ಮಂಜೂರು ಮಾಡಲು ಅನುಮೋದನೆ ಕೋರಿರುವುದನ್ನು ಪರಿಶೀಲಿಸಿದ ಸಭೆಯು ರಜೆ ಅವಧಿಯ ಸಂಬಳ ಪಾವತಿ ಮಾಡುವ ವಿಧಾನ ಹಾಗು ಚಾಲ್ತಿಯಲ್ಲಿರುವ, ಅನುದಾನ ಪಡೆದು ನಿರ್ವಹಿಸುತ್ತಿರುವ ಯೋಜನೆಗಳಿಗೆ ಧಕ್ಕೆಯಾಗದಂತೆ ವಿಶ್ವವಿದ್ಯಾಲಯದ ನಿಯಮಗಳನ್ವಯ ರಜೆ ನೀಡಬಹುದೆಂದು ಸಭೆ ತೀರ್ಮಾನಿಸಿತು.

೧೮೫.೧೯. ಡಾ. ಎಂ.ಉಷಾ, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಇವರು ೧ ವರ್ಷದ ಸಬಾಟಿಕಲ್ ರಜೆಅರ್ಜಿ ಸಲ್ಲಿಸಿದ್ದು, ಅನುಮೋದನೆ ಕೋರಲಾಗಿದೆ.

ನಿರ್ಣಯ : ಡಾ. ಎಂ.ಉಷಾ, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ ಇವರು ೧ ವರ್ಷದ ಸಬಾಟಿಕಲ್ ರಜೆ ಅರ್ಜಿ ಸಲ್ಲಿಸಿದ್ದು, ಅನುಮೋದನೆಗೆ ಕೋರಿರುವುದನ್ನು ಪರಿಶೀಲಿಸಿದ ಸಭೆಯು ಒಂದು ವರ್ಷದ ಸಬಾಟಿಕಲ್ ರಜೆಗೆ ಅನುಮೋದನೆ ನೀಡಿತು. ಜೊತೆಗೆ ವಿಶ್ವವಿದ್ಯಾಲಯದ ಶೈಕ್ಷಣಿಕ ಕೆಲಸಗಳನ್ನು ಗಮದಲ್ಲಿರಿಸಿಕೊಂಡು ಏಕಕಾಲಕ್ಕೆ ಪ್ರತಿ ನಿಕಾಯಕ್ಕೆ ಮೂರು ಜನರಿಗಿಂತ ಹೆಚ್ಚಿನ ಅಧ್ಯಾಪಕರಿಗೆ ಸಬಾಟಿಕಲ್ ರಜೆ ಮಂಜೂರು ಮಾಡಬಾರದು ಎಂದು ಸಭೆ ಸೂಚಿಸಿತು.

೧೮೫.೨೦. ಡಾ. ವೆಂಕಟೇಶ್ ಇಂದ್ವಾಡಿ, ಸಹ ಪ್ರಾಧ್ಯಾಪಕರು ಇವರು ದಿನಾಂಕ: ೦೧.೦೮.೨೦೧೬ರಿಂದ ೩೧.೦೭.೨೦೧೭ರವರೆಗೆ ೧ವರ್ಷ ಸಬಾಟಿಕಲ್ ರಜೆಅರ್ಜಿ ಸಲ್ಲಿಸಿದ್ದು, ಅನುಮೋದನೆ ಕೋರಲಾಗಿದೆ.

ನಿರ್ಣಯ : ಡಾ. ವೆಂಕಟೇಶ್ ಇಂದ್ವಾಡಿ, ಸಹ ಪ್ರಾಧ್ಯಾಪಕರು ಇವರು ದಿನಾಂಕ: ೦೧.೦೮.೨೦೧೬ರಿಂದ ೩೧.೦೭.೨೦೧೭ರವರೆಗೆ ೧ವರ್ಷ ಸಬಾಟಿಕಲ್ ರಜೆಅರ್ಜಿ ಸಲ್ಲಿಸಿದ್ದು, ಅನುಮೋದನೆ ಕೋರಿರುವುದನ್ನು ಪರಿಶೀಲಿಸಿದ ಸಭೆಯು ಈಗ ಸಲ್ಲಿಸಿರುವ ಪ್ರಸ್ತಾವವನ್ನು ಬದಲಾಯಿಸಿ ಅಧ್ಯಯನ ಮಂಡಳಿಯ ಅನುಮೋದನೆ ಪಡೆದು ಸಲ್ಲಿಸಿದ ನಂತರ ಒಂದು ವರ್ಷದ ಸಬಾಟಿಕಲ್ ರಜೆ ಮಂಜೂರಾತಿಗೆ ಅನುಮೋದನೆ ನೀಡಿತು.

ವಿಶ್ವವಿದ್ಯಾಲಯದ ಶೈಕ್ಷಣಿಕ ಕೆಲಸಗಳನ್ನು ಗಮದಲ್ಲಿರಿಸಿಕೊಂಡು ಏಕಕಾಲಕ್ಕೆ ಪ್ರತಿ ನಿಕಾಯಕ್ಕೆ ಗರಿಷ್ಟ ಮೂರು ಜನರಿಗಿಂತ ಹೆಚ್ಚಿನ ಅಧ್ಯಾಪಕರಿಗೆ ಸಬಾಟಿಕಲ್ ರಜೆ ಮಂಜೂರು ಮಾಡಬಾರದು ಎಂದು ಸಭೆ ಸೂಚಿಸಿತು.

೧೮೫.೨೧. ಡಾ. ಎಸ್. ಸಿರಾಜ್ ಅಹಮದ್, ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾಕಾಲೇಜು, ಶಿವಮೊಗ್ಗ ಇವರ ಪ್ರತಿನಿಯೋಜನೆ ಮನವಿ ಬಗ್ಗೆ.

ನಿರ್ಣಯ : ಡಾ. ಎಸ್. ಸಿರಾಜ್ ಅಹಮದ್, ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾಕಾಲೇಜು, ಶಿವಮೊಗ್ಗ ಇವರ ಪ್ರತಿನಿಯೋಜನೆ ಮನವಿಯನ್ನು ಪರಿಶೀಲಿಸಿದ ಸಭೆ ವಿಶ್ವವಿದ್ಯಾಲಯದ ನಿಯಮಗಳನ್ವಯ ಭಾಷಾಂತರ ಅಧ್ಯಯನ ಕೇಂದ್ರಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನು ನಿಗದಿಗೊಳಿಸಿ ವಿಶ್ವವಿದ್ಯಾಲಯದ ನಿಯಮಗಳಿಗೆ ಮತ್ತು ಪ್ರತಿನಿಯೋಜನೆ ನಿಯಮಗಳಿಗೆ ಬದ್ಧಗೊಳಿಸಿ ಕ್ರಮವಹಿಸಬಹುದೆಂದು ಸಭೆ ಸೂಚಿಸಿತು.

೧೮೫.೨೨. ಡಾ. ವೃಷಭೇಂದ್ರ ಅರ್ಕಸಾಲಿ ಇವರ ನಿಯೋಜನೆ ಕುರಿತು.

ನಿರ್ಣಯ : ಡಾ. ವೃಷಭೇಂದ್ರ ಅರ್ಕಸಾಲಿ ಇವರ ನಿಯೋಜನೆ ಕುರಿತು ಚರ್ಚಿಸಿದ ಸಭೆಯು ಸದರಿ ತಜ್ಞರನ್ನು ಆರು ತಿಂಗಳಿಗೆ ಸಂದರ್ಶಕ ತಜ್ಞರನ್ನಾಗಿ ವಿ.ವಿ. ನಿಯಮದಡಿಯಲ್ಲಿ ಗೌರವ ಸಂಭಾವನೆಯನ್ನು ನಿಗದಿಗೊಳಿಸಿ ಭಾಷಾಂತರ ಅಧ್ಯಯನ ಕೇಂದ್ರಕ್ಕೆ ನಿರ್ದಿಷ್ಟ ಯೋಜನೆಗಳನ್ನು ಪೂರೈಸುವ ಶರತ್ತಿಗೊಳಪಡಿಸಿ ನಿಯೋಜಿಸಿಕೊಳ್ಳಬಹುದು ಎಂದು ಸಭೆ ಒಪ್ಪಿಗೆ ನೀಡಿತು.

೧೮೫.೨೩. ವಿಶ್ವವಿದ್ಯಾಲಯದಲ್ಲಿ ರಿಕ್ತವಿರುವ ೧೭ ಬೋಧಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುವ ಕುರಿತು.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ರಿಕ್ತವಿರುವ ೧೭ ಬೋಧಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ನಿಯಮಾನುಸಾರ ಶಿಕ್ಷಣ ಇಲಾಖೆಗೆ ಪತ್ರ ಬರೆದು ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಗಳ ಒಪ್ಪಿಗೆ ಬಂದ ನಂತರ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

೧೮೫.೨೪. ಮಹಿಳಾ ಅಧ್ಯಯನ ಕೇಂದ್ರದ ಸಿಬ್ಬಂದಿಗಳ ಮನವಿ ಮತ್ತು ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರ ಪತ್ರದ ಕುರಿತು.

ನಿರ್ಣಯ : ಮಹಿಳಾ ಅಧ್ಯಯನ ಕೇಂದ್ರಕ್ಕೆ ಯುಜಿಸಿ ಯಿಂದ ಅನುದಾನ ಬರದೇ ಇರುವುದರಿಂದ ಕೇಂದ್ರದ ಸಿಬ್ಬಂದಿಯ ವೇತನವನ್ನು ದೀರ್ಘ ಕಾಲ ವಿಶ್ವವಿದ್ಯಾಲಯ ಭರಿಸಲು ಆಗದ ಕಾರಣಕ್ಕಾಗಿ ಕೇಂದ್ರವನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ವಿಲೀನಗೊಳಿಸಲಾಗಿದೆ. ಆ ಹಿನ್ನೆಲೆಯಲ್ಲಿ ಮಹಿಳಾ ಅಧ್ಯಯನ ಕೇಂದ್ರಕ್ಕೆ ಆಯ್ಕೆ ಮಾಡಲಾದ ಸಿಬ್ಬಂದಿಯನ್ನು ಬಿಡುಗಡೆಗೊಳಿಸಲಾಗಿತ್ತು. ಆಯ್ಕೆಯಾಗಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಬಿಡುಗಡೆಗೊಂಡದ್ದಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ತಾವು ಐದು ವರ್ಷದ ಅವಧಿಗೆ (ಯೋಜನಾ ಅವಧಿ ವರ್ಷ) ನೇಮಕಗೊಂಡಿರುತ್ತೇವೆ. ತಮಗೆ ಯುಜಿಸಿ ಯಿಂದ ಅನುದಾನ ಬಂದ ಮೇಲೆ ವೇತನ ಪಾವತಿಸಬಹುದು ಎಂಬ ಶರತ್ತಿಗೊಳ್ಳಪಟ್ಟಾದರೂ ತಮ್ಮ ಸೇವೆಯನ್ನು ಮುಂದುವರೆಸಲು ಮನವಿ ಮಾಡಿಕೊಂಡಿದ್ದಾರೆ.

ಮಹಿಳಾ ಅಧ್ಯಯನ ಕೇಂದ್ರದ ಸಿಬ್ಬಂದಿಯ ಮನವಿಯನ್ನು ಪರಿಶೀಲಿಸಿದ ಸಭೆ ಅನುದಾನ ಬಂದ ಮೇಲೆ ವೇತನ ಪಾವತಿಸುವ ಶರತ್ತಿನೊಂದಿಗೆ ಅವರ ಸೇವೆಯನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ಬಳಸಿಕೊಳ್ಳಲು ಸಭೆ ಸೂಚಿಸಿತು.

ಮಹಿಳಾ ಅಧ್ಯನ ವಿಭಾಗ ಮುಖ್ಯಸ್ಥರು ತಮ್ಮ ಅವಧಿ ಮುಗಿದರುವ ಬಗ್ಗೆ ಆಡಳಿತಾಂಗದ ಗಮನಕ್ಕೆ ತಂದಿದ್ದಾರೆ. ಮುಖ್ಯಸ್ಥರ ಮನವಿ ಪತ್ರವನ್ನು ಪರಿಶೀಲಿಸಿದ ಸಭೆ ಮುಖ್ಯಸ್ಥರನ್ನು ಅವರ ಅವಧಿ ಮುಗಿದ ಮೇಲೆ ಬಿಡುಗಡೆ ಮಾಡಬಹುದು, ನಿಯಮಾನುಸಾರ ಜೇಷ್ಠತಾ ನಿಯಮದನ್ವಯ ನಂತರದ ಅಧ್ಯಾಪಕರನ್ನು ಮುಖ್ಯಸ್ಥರನ್ನಾಗಿ ಮಾಡಬಹುದೆಂದು ಸಭೆ ಸೂಚಿಸಿತು.

ಮಹಿಳಾ ಅಧ್ಯಯ ವಿಭಾಗದೊಡನೆ ಮಹಿಳಾ ಅಧ್ಯಯನ ಕೇಂದ್ರ ವಿಲೀನಗೊಳಿಸಿರುವುದರಿಂದ ಮುಖ್ಯಸ್ಥರೊಬ್ಬರೇ ಎರಡೂ ಜವಾಬ್ದಾರಿಗಳನ್ನು ನಿರ್ವಹಿಸುವುದು ಕಷ್ಟ ಎಂದು ಪರಿಗಣಿಸಿದ ಸಭೆಯು ಕೇಂದ್ರ ಜವಾಬ್ದಾರಿಯನ್ನು ಜೇಷ್ಠತಾ ಅನ್ವಯ ವಿಭಾಗದ ಮತ್ತೊಬ್ಬ ಅಧ್ಯಾಪಕರಿಗೆ ವಹಿಸಬೇಕೆಂದು ಸಭೆ ಸೂಚಿಸಿತು.

೧೮೫.೨೫. ವಿಜ್ಞಾನ ಸಂಗಾತಿ ಸಂಪಾದಕರಾದ ಶ್ರೀ ಜೈನುಲ್ಲಾ ಬಳ್ಳಾರಿ ಇವರು ಮಾಸಿಕ ಗೌರವ ಸಂಭಾವನೆಯನ್ನು ಹೆಚ್ಚಿಸಲು ಮನವಿ ಮಾಡಿಕೊಂಡಿದ್ದಾರೆ. ಇವರ ಗೌರವ ಸಂಭಾವನೆ ಹೆಚ್ಚಳದ ಬಗ್ಗೆ.

ನಿರ್ಣಯ : ವಿಜ್ಞಾನ ಸಂಗಾತಿ ಸಂಪಾದಕರಾದ ಶ್ರೀ ಜೈನುಲ್ಲಾ ಬಳ್ಳಾರಿ ಇವರು ಮಾಸಿಕ ಗೌರವ ಸಂಭಾವನೆಯನ್ನು ಹೆಚ್ಚಿಸಲು ಕೋರಿದ ಮನವಿಯನ್ನು ಪರಿಶೀಲಿಸಿದ ಸಭೆ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ಈಗಿರುವಂತೆ ಮಾಸಿಕ ಸಂಭಾವನೆಯನ್ನು ಮುಂದುವರೆಸಲು ಸಭೆ ತೀರ್ಮಾನಿಸಿತು.

೧೮೫.೨೬. ವಿವಿಯ ಆರೋಗ್ಯ ಕೇಂದ್ರಕ್ಕೆ ಒಬ್ಬ ವೈದ್ಯರು ಹಾಗೂ ಇಬ್ಬರು ದಾದಿಯರನ್ನು ತಾತ್ಕಾಲಿಕವಾಗಿ ನೇಮಿಸಿದ್ದು ವೇತನ ನಿಗದಿಪಡಿಸುವ ಬಗೆಗೆ ಅನುಮೊದನೆ ಕೋರಿ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಆರೋಗ್ಯ ನಿಮಿತ್ತ ಒಬ್ಬ ವೈದ್ಯರು ಮತ್ತು ಇಬ್ಬರು ದಾದಿಯರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವುದ್ಕಕೆ ಸಭೆ ಅನುಮೋದನೆ ನೀಡುವುದರ ಜೊತೆಗೆ ವೈದ್ಯರ ಸಂಚಿತ ಮಾಸಿಕ ವೇತನವನ್ನು ೨೫,೦೦೦/- (ಇಪ್ಪತ್ತೈದು ಸಾವಿರ ಮಾತ್ರ) ರೂಗಳು, ದಾದಿಯರಿಗೆ ಸಂಚಿತ ಮಾಸಿಕ ವೇತನ ಈಗಾಗಲೇ ನೀಡುತ್ತಿವಂತೆ ರೂ ೮,೫೦೦/- (ಎಂಟುಸಾವಿರದ ಐದುನೂರು ಮಾತ್ರ)ಗಳನ್ನು ನಿಗದಿ ಮಾಡಬಹುದೆಂದು ಸಭೆ ಸೂಚಿಸಿತು.

೧೮೫.೨೭. ವಿಶ್ವವಿದ್ಯಾಲಯದಲ್ಲಿ ವಾಹನ ಚಾಲಕರ ಕೊರತೆ ಇದ್ದು ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವ ಕೆಲವು ನೌಕರರು ಚಾಲನೆ ಪರವಾನಗೆ ಹೊಂದಿದ್ದು, ಚಾಲಕ ಸೇವೆಗೆ ಮನವಿಮಾಡಿದ್ದಾರೆ. ತುರ್ತು ಸಂದರ್ಭದಲ್ಲಿ ವಾಹನ ಚಲಿಸಲು ಅನುಮತಿ ನೀಡುವ ಬಗ್ಗೆ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿಗಳು ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ಸಮಿತಿ ಸಭೆಯು ಅಂಥವರಿಂದ ವಾಹನಾ ಚಾಲಕ ಸೇವೆ ಪಡೆಯಲು ಸಭೆ ಒಪ್ಪಿಗೆ ಸೂಚಿಸಿತು. ಆದರೆ ತಾತ್ಕಾಲಿಕ ಸಿಬ್ಬಂದಿಯ ವಾಹನ ಚಾಲನೆಗೆ ಸಂಬಂಧಿಸಿದ ವಾಹನ ಚಾಲನ ಪರವಾನಿಗೆ ಮತ್ತು ಬ್ಯಾಡ್ಜ್ ಮತ್ತಿತರ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಅರ್ಹತೆ ಹೊಂದಿದ ಸಿಬ್ಬಂದಿಗೆ ವಾಹನ ಚಾಲನೆಗೆ ಅನುಮತಿ ನೀಡಬಹುದೆಂದು ಸಭೆ ಸೂಚಿಸಿತು. ವಾಹನ ಚಾಲನಾ ಸೇವೆ ಸಲ್ಲಿಸುವ ಸಿಬ್ಬಂದಿಗೆ ಮಾಸಿಕ ಹೆಚ್ಚುವರಿಯಾಗಿ ರೂ.೧೦೦೦/- (ಒಂದು ಸಾವಿರ ಮಾತ್ರ) ಗಳನ್ನು ಪಾವತಿಸಬಹುದು. ಮತ್ತು ವಾಹನ ಚಾಲನೆಯ ಸಂದರ್ಭದಲ್ಲಿ ಆಗುವ ಅವಘಡಗಳಿಗೆ ಚಾಲಕರನ್ನೇ ಹೊಣೆಗಾರರನ್ನಾಗಿ ಮಾಡುವುದು ಎಂದು ಸಭೆ ಸೂಚಿಸಿತು.

೧೮೫.೨೮. ಶ್ರೀ ಎಚ್.ಎಂ. ಸೋಮನಾಥ್, ಅಧೀಕ್ಷಕರು ಇವರು ಮಾಹಿತಿ ಹಕ್ಕಿನ ಅಡಿಯಲ್ಲಿ ಪ್ರಾಧ್ಯಾಪಕರುಗಳ ವೈಯಕ್ತಿಕ ಮಾಹಿತಿ ಕೋರುತ್ತಿರುವ ಕುರಿತು ಮತ್ತು ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿರುವ ಕುರಿತು.

ನಿರ್ಣಯ : ಶ್ರೀ ಎಚ್.ಎಂ. ಸೋಮನಾಥ, ಅಧೀಕ್ಷಕರು ಇವರು ಮಾಹಿತಿ ಹಕ್ಕಿನ ಅಡಿಯಲ್ಲಿ ಪ್ರಾಧ್ಯಾಪಕರುಗಳ ವೈಯಕ್ತಿಕ ಮಾಹಿತಿ, ಆಡಳಿತಕ್ಕೆ ಸಂಬಂಧಿಸಿದ ಮಾಹಿತಿ ಕೋರುತ್ತಿರುವ ಮಾಹಿತಿ ಮತ್ತು ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿರುವ ಕುರಿತಂತೆ ಕೂಲಂಕಶವಾಗಿ ಸಭೆ ಚರ್ಚಿಸಿ ವಿಶ್ವವಿದ್ಯಾಲಯದ ಸಿಬ್ಬಂದಿಯಾಗಿರುವ ಶ್ರೀ ಎಚ್.ಎಂ.ಸೋಮನಾಥ ಅವರು ಮಾಹಿತಿ ಹಕ್ಕಿನಡಿ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಮಾಹಿತಿಯನ್ನು ಕೋರುತ್ತಿರುವುದು ಮತ್ತು ಇಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿ.ವಿ ಅನುಮತಿ ಪಡೆಯದೇ ತಮಗೆ ತೋಚಿದಂತೆ ಪತ್ರಿಕಾ ಹೇಳಿಕೆ ನೀಡುತ್ತಿರುವುದನ್ನು ಸಭೆ ಸರ್ವಾನುಮತದಿಂದ ಖಂಡಿಸಿತು. ವಿಶ್ವವಿದ್ಯಾಲಯದ ಸಿಬ್ಬಂದಿಯಾಗಿ ತಮಗೆ ಸಂಬಂಧ ಪಡದ ಮತ್ತು ಯಾವುದೇ ಸಾರ್ವಜನಿಕ ಹಿತಾಸಕ್ತಿ ಹೊಂದಿರದ ವಿ.ವಿಯ ಇತರೆ ಮಾಹಿತಿಯನ್ನು ಕೋರುವ ಮೂಲಕ ವಿಶ್ವವಿದ್ಯಾಲಯದ ಕೆಲಸಕ್ಕೆ ಅಡಚಣೆ ಉಂಟು ಮಾಡುತ್ತಿರುವುದಲ್ಲದೆ ವಿಶ್ವವಿದ್ಯಾಲಯವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿರುವುದು ಅತ್ಯಂತ ಖೇದಕರ ಸಂಗತಿ ಎಂದು ಭಾವಿಸಿ ಅವರ ಮೇಲೆ ಆಡಳಿತಾತ್ಮಕ ಸೂಕ್ತ ಕ್ರಮ ಕೈಗೊಳ್ಳಲು ಆಡಳಿತಕ್ಕೆ ಸಭೆ ಸೂಚಿಸಿತು.

ಶ್ರೀ ಎಚ್.ಎಂ.ಸೋಮನಾಥ, ಅದೀಕ್ಷಕ ಇವರು ತಮ್ಮ ಕಾರ್ಯವ್ಯಾಪ್ತಿಯನ್ನು ಮೀರಿ ವಿಶ್ವವಿದ್ಯಾಲಯದ ಘನತೆಗೆ ಕುಂದನ್ನುಂಟು ಮಾಡುತ್ತಿರುವುದಲ್ಲದೆ ವಿಶ್ವವಿದ್ಯಾಲಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ವೈದ್ಯಕೀಯ ರಜೆಗೆ ಒತ್ತಾಯಿಸುತ್ತಿರುವುದು, ಏಪ್ರಿಲ್ ೨೫, ೨೦೧೬ರಂದು ಪೊಲೀಸರಿಂದ ದಸ್ತಗಿರಿಯಾಗಿ ಜಾಮೀನು ಪಡೆದಿರುವ ಬಗ್ಗೆ ಅಧಿಕೃತ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ನೀಡದೆ ಇರುವುದು, ಅದರಿಂದ ಏಪ್ರಿಲ್ ೨೫, ೨೦೧೬ರ ಪೂರ್ಣ ಹಾಜರಿಗಾಗಿ ಒತ್ತಾಯಿಸುತ್ತಿರುವುದು, ವಿಶ್ವವಿದ್ಯಾಲಯ ಮತ್ತು ಆಡಳಿತದ ವಿರುದ್ಧ ಪತ್ರಿಕೆಗಳು ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿರುವುದು, ಮೇಲಾಧಿಕಾರಿಗಳ ಮತ್ತು ವಿಶ್ವವಿದ್ಯಾಲಯ ಅನುಮತಿ ಪಡೆಯದೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸುವುದು, ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆಯುವುದು. ಇವರ ಇಂಥ ವರ್ತನೆಗಳ ಕುರಿತು ವಿಚಾರಣಾ ಸಮಿತಿಯನ್ನು ರಚಿಸಿ ತುರ್ತಾಗಿ ಕ್ರಮವಹಿಸಲು ಸಭೆ ಸೂಚಿಸಿತು.

ವಿಶ್ವವಿದ್ಯಾಲಯದ ಪ್ರತಿಯೊಬ್ಬ ಸಿಬ್ಬಂದಿ ವಿಶ್ವವಿದ್ಯಾಲಯವನ್ನು ಘನತೆಯಿಂದ ಕಾಣಬೇಕು, ವಿಶ್ವವಿದ್ಯಾಲಯದ ಮಾಹಿತಿಯನ್ನು ವಿಶ್ವವಿದ್ಯಾಲಯದ ಗಮನಕ್ಕೆ ಬಾರದೆ ಹೊರಗಿನವರಿಗೆ ನೀಡುವಂತಿಲ್ಲ. ಮತ್ತು ವಿಶ್ವವಿದ್ಯಾಲಯವನ್ನು ಇಕ್ಕಟ್ಟಿಗೆ ಸಿಲುಕಿಸುವ ಹಾಗಿಲ್ಲ. ವಿಶ್ವವಿದ್ಯಾಲಯದ ಪರಿನಿಯಮ ೩೩ (ಅ) (ಆ) ಮತ್ತು (ಇ) ಅನ್ವಯ ಅಂಥವರು ಶಿಕ್ಷೆಗೆ ಅರ್ಹರು. ಕಳೆದ ಕೆಲವು ವರ್ಷಗಳಿಂದ ಶ್ರೀ ಎಚ್.ಎಂ.ಸೋಮನಾಥ್ ಅವರು ವಿಶ್ವವಿದ್ಯಾಲಯದ ಸಿಬ್ಬಂದಿಯಾಗಿ ತಮಗೆ ಯಾವ ರೀತಿಯಲ್ಲೂ ಸಂಬಂದಪಡದ ವಿಶ್ವವಿದ್ಯಾಲಯದ ಮಾಹಿತಿಯನ್ನು ಮಾಹಿತಿ ಹಕ್ಕಿನಡಿ ಕೋರಿ ವಿಶ್ವವಿದ್ಯಾಲಯದ ಕೆಲಸಗಳಿಗೆ ಅಡ್ಡಿಯನ್ನುಂಟು ಮಾಡುತ್ತಿರುವರು. ಇವರ ಮೇಲೆ ಈ ಕೂಡಲೆ ಶಿಕ್ಷಾರ್ಹ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳು ಮತ್ತು ಮಾನ್ಯ ಕುಲಸಚಿವರಿಗೆ ಕಾರ್ಯಕಾರಿ ಸಮಿತಿ ಸಭೆ ಸೂಚಿಸಿತು.

ಮುದ್ರಣ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ಅನುಮತಿ ಇಲ್ಲದೆ ಹೇಳಿಕೆಗಳನ್ನು ನೀಡುವ ಮೂಲಕ ವಿಶ್ವವಿದ್ಯಾಲಯದ ಘನತೆಗೆ ಕುಂದನ್ನುಂಟು ಮಾಡುತ್ತಿರುವ, ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ತರುತ್ತಿರುವುದು ಖಂಡನಾರ್ಹವಾಗಿದೆ. ಇಂಥ ಹೇಳಿಕೆ ನೀಡಿರುವವರು ಯಾರೇ ಆಗಲಿ ಅಂಥವರ ಮೇಲೆ ವಿಶ್ವವಿದ್ಯಾಲಯ ತನ್ನ ಅಧಿನಿಯಮ ಮತ್ತು ಪರಿನಿಯಮ ಮತ್ತು ಕೆಸಿಎಸ್ಆರ್ ನಿಯಮಗಳನ್ವಯ ತಕ್ಷಣ ಸೂಕ್ತ ಕ್ರಮವಹಿಸಲು ಸಭೆ ನಿರ್ಣಯಿಸಿತು. ಜೊತೆಗೆ ಶ್ರೀ ಎಚ್.ಎಂ. ಸೋಮನಾಥ ಅವರ ಈ ಬಗೆಯ ನಡತೆ ಕುರಿತಂತೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ವಿಶ್ವವಿದ್ಯಾಲಯಕ್ಕೆ ವರದಿ ಪಡೆದು ಕ್ರಮವಹಿಸಲು ಸಭೆ ಸೂಚಿಸಿತು.

೧೮೫.೨೯. ಶ್ರೀ ಎಸ್. ರಾಮಾನಾಯ್ಕ, ಪ್ರಥಮ ದರ್ಜೆ ಸಹಾಯಕ ಇವರು ಶ್ರೀ ಎಚ್.ಎಂ. ಸೋಮನಾಥ್, ಅಧೀಕ್ಷಕರು ಇವರಿಗೆ ಮುಂಬಡ್ತಿ ನೀಡಿರುವಂತೆ ತಮಗೂ ಅಧೀಕ್ಷಕ ಹುದ್ದೆಗೆ ಮುಂಬಡ್ತಿ ಕೋರಿರುವ ಬಗ್ಗೆ.

ಟಿಪ್ಪಣಿ : ಅದೀಕ್ಷಕರಾಗಿ ಮುಂಬಡ್ತಿ ಹೊಂದಿರುವ ಶ್ರೀ ಎಚ್.ಎಂ.ಸೋಮನಾಥ್ ಅವರಿಗೆ ನೀಡಿದ ಮಾದರಿಯಲ್ಲೇ ತಮಗೂ ಮುಂಬಡ್ತಿ ನೀಡಬೇಕೆಂದು ಶ್ರೀ ಎಸ್. ರಾಮಾನಾಯ್ಕ, ಪ್ರಥಮ ದರ್ಜೆ ಸಹಾಯಕರು ಇವರು ಮನವಿ ಸಲ್ಲಿಸಿದ್ದಾರೆ. ಇದಲ್ಲದೆ ಶ್ರೀ ಕೆ. ಶಿವಪ್ಪ ಮತ್ತಿತರರು ಕೂಡ ಇದೇ ಮಾದರಿಯಲ್ಲಿ ತಮಗೂ ಸಹ ಮುಂಬಡ್ತಿ ನೀಡಬೇಕೆಂದು ಅರ್ಜಿಗಳನ್ನು ಸಲ್ಲಿಸಿ ಮನವಿ ಮಾಡಿಕೊಂಡಿರುತ್ತಾರೆ. ಇನ್ನು ಕೆಲವರು ಶ್ರೀ ಎಚ್.ಎಂ.ಸೋಮನಾಥ್ ಅವರು ಏಕ ಕಾಲಕ್ಕೆ ಎರಡು ಮುಂಬಡ್ತಿ ಪಡೆದಿರುವುದನ್ನು ಪ್ರಶ್ನಿಸಿದ್ದಾರೆ. ಅವರಿಗೆ ಮುಂಬಡ್ತಿ ನೀಡಿರುವಂತೆ ತಮಗೂ ಕೂಡ ಮುಂಬಡ್ತಿ ನೀಡಲು ಮನವಿ ಮಾಡಿಕೊಂಡಿರುತ್ತಾರೆ. ಇದನ್ನು ಅಮೂಲಾಗ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಬೇಕಿದೆ.

ನಿರ್ಣಯ: ಶ್ರೀ ಎಸ್.ರಾಮಾನಾಯ್ಕ ಮತ್ತು ಇತರರು ಕೋರಿದ ಮನವಿಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿದ ಸಭೆ ಶ್ರೀ ಎಚ್.ಎಂ. ಸೋಮನಾಥ ಅವರಿಗೆ ನೀಡಿದಂತೆ ಮುಂಬಡ್ತಿ ನೀಡಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿತು. ಜೊತೆಗೆ ಶ್ರೀ ಎಚ್.ಎಂ.ಸೋಮನಾಥ ಅವರಿಗೂ ನೀಡಿದ ಮುಂಬಡ್ತಿ ಕುರಿತು ಪುನರ್‌ಪರಿಶೀಲಿಸಿ ಈ ಕೆಳಕಂಡ ಕ್ರಮವನ್ನು ಕೈಗೊಂಡಿತು.

ವಿಷಯವನ್ನು ವಿವರವಾಗಿ ಪರಿಶೀಲಿದ ಕಾರ್ಯಕಾರಿ ಸಮಿತಿ ಸಭೆ ಸದರಿ ಸಿಬ್ಬಂದಿ ಪದೋನ್ನತಿ ಪಡೆಯುವ ಪೂರ್ವದಲ್ಲಿ ದಿನಾಂಕ: ೦೩-೦೪-೨೦೧೪ ರಂದು ಬಳ್ಳಾರಿ ಜಿಲ್ಲಾಧಿಕಾರಿಗಳು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಶ್ರೀ ಎಚ್.ಎಂ.ಸೋಮನಾಥ್ ಅವರ ವಿರುದ್ಧ ಆರ್.ಪಿ.ಆಕ್ಟ್ ೧೯೫೧ ಅಡಿ ಕಲಂ ೧೨೯ ಪ್ರಕರಣ ದಾಖಲಿಸಿರುವ ನಿಮಿತ್ತ ಸದರಿ ಸಿಬ್ಬಂದಿಯ ನಿಲಂಬನೆಗೆ ಸೂಚಿಸಿರುತ್ತಾರೆ. ಆ ಹಿನ್ನೆಲೆಯಲ್ಲಿ ಶ್ರೀ ಎಚ್.ಎಂ.ಸೋಮನಾಥ್ ಅವರನ್ನು ೦೪-೦೪-೨೦೧೪ ರಂದು ವಿಶ್ವವಿದ್ಯಾಲಯದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಆದರೆ ಸದರಿ ಸಿಬ್ಬಂದಿಯ ಮನವಿ ಮೇರೆಗೆ ವಿಶ್ವವಿದ್ಯಾಲಯ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಅದರ ವರದಿ ಆಧಾರದಲ್ಲಿ ವಿ.ವಿಯಲ್ಲಿನ ಆಡಳಿತ ಸಿಬ್ಬಂದಿ ಕೊರತೆ ಹಿನ್ನೆಲೆಯಲ್ಲಿ ಶರತ್ತುಬದ್ಧವಾಗಿ ಹಾಗೂ ಮಾನ್ಯ ಜಿಲ್ಲಾ ಚುನಾವಣಾಧಿಕಾರಿಗಳ/ಜಿಲ್ಲಾಧಿಕಾರಿಗಳ ಅಂತಿಮ ನಿರ್ಣಯ ಕಾಯ್ದಿರಿಸಿ ಕಿರಿಯ ಸಹಾಯಕರಾಗಿ ಕೆಲಸ ನಿರ್ವಹಿಸಲು ಅಮಾನತ್ತು ಆದೇಶ ಹಿಂಪಡೆದು ಅವಕಾಶ ಕಲ್ಪಿಸಲಾಗಿತ್ತು.

ಇವರು ಜನವರಿ ೨೦೧೫ ರಲ್ಲಿ ಕಿರಿಯ ಸಹಾಯಕರ ಹುದ್ದೆಯಿಂದ ಹಿರಿಯ ಸಹಾಯಕರ ಹುದ್ದೆಗೆ, ಹಿರಿಯ ಸಹಾಯಕರ ಹುದ್ದೆಯಿಂದ ಅದೀಕ್ಷಕರ ಹುದ್ದೆಗೆ ಎರಡು ಮುಂಬಡ್ತಿಯನ್ನು ಪಡೆದಿರುತ್ತಾರೆ. ಎಫ್.ಐ.ಆರ್ ದಾಖಲಾಗಿರುವ ಸಿಬ್ಬಂದಿಗೆ ಈ ಪ್ರಕರಣದಲ್ಲಿ, ಪ್ರಕರಣ ದಾಖಲಿಸಿದ ಜಿಲ್ಲಾಧಿಕಾರಿಗಳಿಂದ ದೋಷಮುಕ್ತರಾಗಿರುವ ಬಗ್ಗೆ ಅಧಿಕೃತ ಸೂಚನೆ ಬರುವ ಮುನ್ನವೇ ಒಟ್ಟಿಗೆ ಒಂದೇ ದಿನ ದಿನಾಂಕ :೨೨.೦೧.೨೦೧೬ ರಂದು ಎರಡು ಮುಂಬಡ್ತಿಯನ್ನು ನೀಡಲಾಗಿದ್ದು ಅದರಲ್ಲಿ ಹಿರಿಯ ಸಹಾಯಕ ಹುದ್ದೆಯನ್ನು ೨೦೦೩ ರಿಂದ ಪೂರ್ವಾನ್ವಯಗೊಳಿಸಿ ನೀಡಲಾಗಿದೆ. ಮತ್ತು ಅದೇ ದಿನ ಅದೀಕ್ಷಕ ಹುದ್ದೆಗೂ ಮುಂಬಡ್ತಿ ನೀಡಲಾಗಿದೆ. ಸದರಿ ಸಿಬ್ಬಂದಿಯ ಅದೀಕ್ಷಕ ಹುದ್ದೆಯ ಮುಂಬಡ್ತಿಯು ಎರಡು ಬಗೆಯಲ್ಲಿದ್ದು ಒಂದರಲ್ಲಿ ರಿಕ್ತ ಹುದ್ದೆಗೆ ಪದೋನ್ನತಿ ಎಂದಿದ್ದು ಸರ್ಕಾರಕ್ಕೆ ಸಲ್ಲಿಸಿದ ಅಧಿಕೃತ ದಾಖಲೆಗಳಲ್ಲಿ ಸೂಪರ್‌ನೂಮರಿ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ ಎಂದು ದಾಖಲಿಸಿದೆ.

ದಿನಾಂಕ : ೨೪-೦೬-೨೦೧೬ ರಂದು ಲೆಕ್ಕ ತಪಾಸಣೆ ಅಧಿಕಾರಿಗಳು ನೀಡಿರುವ ಆಕ್ಷೇಪಣೆಯಲ್ಲಿ ಸದರಿ ನೌಕರರ ಅಮಾನತ್ತು ಚುನಾವಣಾ ಕರ್ತವ್ಯ ಲೋಪ ಮತ್ತು ದುರ್ನಡತೆಗೆ ಸಂಬಂಧಿಸಿದ್ದಾಗಿರುವುದರಿಂದ ಅಮಾನತ್ತು ಹಿಂತೆಗೆಯುವ ಕುರಿತು ಮುಖ್ಯ ಚುನಾವಣಾಧಿಕಾರಿಗಳೇ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ ಎಂದು ದಾಖಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸದರಿಯವರ ಅಮಾನತ್ತು ರದ್ದುಪಡಿಸಲು ಮಾನ್ಯ ಜಿಲ್ಲಾ ಚುನಾವಣಾಧಿಕಾರಿಗಳು/ಜಿಲ್ಲಾಧಿಕಾರಗಳು ಅವರಿಂದ ಅಧಿಕೃತವಾಗಿ ಸೂಚನೆ ಬಂದಿರುವುದಿಲ್ಲ. ಹಾಗೂ ಸದರಿಯವರು ಅಮಾನತ್ತಾಗುವಾಗ ಕಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅಮಾನತ್ತಿನ ಅವಧಿಯಲ್ಲಿ ಅಥವಾ ವಿಚಾರಣೆಯನ್ನು ಕಾಯ್ದಿರಿಸಿದ ಅವಧಿಯಲ್ಲಿ ನೀಡಿದ ಯಾವುದೇ ಮುಂಬಡ್ತಿಗಳು ಊರ್ಜಿತವಾಗುವುದಿಲ್ಲ. ಸದರಿಯವರು ಈಗ ಪೂರ್ವಾನ್ವಯಗೊಳಿಸಿ ಪಡೆದಿರುವ ಹಿರಿಯ ಸಹಾಯಕರ ಹುದ್ದೆಯ ಮುಂಬಡ್ತಿಯು ಅಮಾನತ್ತಿನ ಅವಧಿಯನ್ನು ಒಳಗೊಂಡಿರುವುದರಿಂದ ಹಿರಿಯ ಸಹಾಯಕ ಹುದ್ದೆಯ ಮುಂಬಡ್ತಿಯ ಆದೇಶವನ್ನು ರದ್ದುಗೊಳಿಸಲು ಸಭೆ ನಿರ್ಣಯಿಸಿತು. ಹಿರಿಯ ಸಹಾಯಕ ಹುದ್ದೆಯ ಮುಂಬಡ್ತಿ ರದ್ದಾಗುವ ಕಾರಣ ಸಹಜವಾಗಿಯೇ ಸದರಿಯವರು ಕಿರಿಯ ಸಹಾಯಕರ ಹುದ್ದೆಗೆ ಮರಳಲ್ಪಡುತ್ತಾರೆ. ಹಿರಿಯ ಸಹಾಯಕರ ಮುಂಬಡ್ತಿ ಹುದ್ದೆ ರದ್ದಾಗುವ ಕಾರಣ ಅದೀಕ್ಷಕರ ಹುದ್ದೆ ತನ್ನಿಂದ ತಾನೆ ರದ್ದಾಗುತ್ತದೆ.

ಪ್ರಕರಣ ದಾಖಲಿಸಿರುವ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಂದ ಅಮಾನತ್ತು ರದ್ದುಪಡಿಸುವ ಅಥವಾ ಈ ಕುರಿತು ಅಂತಿಮ ನಿರ್ಣಯದ ಅಧಿಕೃತ ಆದೇಶ ಬಂದ ನಂತರ ಜಾರಿಯಲ್ಲಿರುವ ನಿಯಮಗಳನುಸಾರ ಸದರಿಯವರ ಮುಂಬಡ್ತಿಗೆ ಅರ್ಜಿ ಪಡೆದು ಕ್ರಮವಹಿಸಲು ಸಭೆ ಸೂಚಿಸಿತು. ಇದಕ್ಕೆ ಸಂಬಂಧಿಸಿದಂತೆ ಸದರಿ ಸಿಬ್ಬಂದಿ ಆಡಿಟ್ ಆಕ್ಷೇಪಣೆ ಇನ್ನಾವುದೇ ನಿಯಮಗಳ ಅನುಸರಣೆಯ ತೊಡಕುಗಳು ಉದ್ಭವಿಸಿದಲ್ಲಿ ಅದಕ್ಕೆ ನಾನೇ ಹೊಣೆಗಾರನಾಗುತ್ತೇನೆ ಈ ಹಿಂದಿನ (ಬಡ್ತಿಗೆ ಮೊದಲಿನ) ಯಥಾಸ್ಥಿತಿಗೆ ಮರಳಲು ಒಪ್ಪಿರುತ್ತೇನೆ ಎಂದು ಶರತ್ತಿನ ಮುಚ್ಚಳಿಕೆ ಪತ್ರವನ್ನು ನೀಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಕಿರಿಯ ಸಹಾಯಕ ಹುದ್ದೆಗೆ ಮರಳಿಸಲು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಸೂಚನೆ ನೀಡುವವರೆಗೆ ಅಮಾನತ್ತಿನಲ್ಲಿಡಲು ಮತ್ತು ಇವರು ಇದುವರೆಗೆ ಪಡೆದಿರುವ ಹೆಚ್ಚುವರಿ ವೇತನವನ್ನು ಮೂವತ್ತು ಸಮಾನ ಕಂತುಗಳಲ್ಲಿ ಮುರಿದುಕೊಳ್ಳಲು ಸಭೆಯು ನಿರ್ಣಯಿಸಿತು.

ಇಂತಹ ಮುಂಬಡ್ತಿಯ ಮನವಿಗಳನ್ನು ಪರಿಗಣಿಸದಿರಲು ಸಭೆ ಸೂಚಿಸಿತು ಮತ್ತು ಇನ್ನು ಮುಂದೆ ನೀಡುವ ಮುಂಬಡ್ತಿಗಳಿಗಾಗಿ ಸೂಕ್ತ ಸಮಿತಿಗಳನ್ನು ರಚಿಸಿ ನಿಯಮಾನುಸಾರ ಶಿಫಾರಸ್ಸು ಪಡೆದು ಕ್ರಮವಹಿಸಲು ಸಭೆ ಸೂಚಿಸಿತು.

೧೮೫.೩೦. ಶ್ರೀ ಎಂ.ಸಿ. ಗುಡಿಮನಿ ಇವರು ಸಹಾಯಕ ಗ್ರಂಥಪಾಲಕರ ನೇಮಕಾತಿಯನ್ನು ಸಿಂಧುಗೊಳಿಸಲು ಕೋರಿರುವ ಮನವಿ ಪತ್ರ

ನಿರ್ಣಯ : ಶ್ರೀ ಎಂ.ಸಿ. ಗುಡಿಮನಿ ಇವರು ಸಹಾಯಕ ಗ್ರಂಥಪಾಲಕರ ನೇಮಕಾತಿಯನ್ನು ಸಿಂಧುಗೊಳಿಸಲು ಕೋರಿರುವ ಮನವಿ ಪತ್ರವನ್ನು ಪರಿಶೀಲಿಸಿದ ಸಭೆಯು ಡೀನ್ ಒಬ್ಬರ ಅಧ್ಯಕ್ಷತೆಯಲ್ಲಿ ತಜ್ಞ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವುದು. ಸಮಿತಿ ನೀಡುವ ಶಿಫಾರಸ್ಸಿನ ಅನ್ವಯ ಕ್ರಮವಹಿಸಬಹುದೆಂದು ಸಭೆ ಸೂಚಿಸಿತು. ತಜ್ಞರ ಆಯ್ಕೆ ಕುಲಪತಿಗಳಿಗೆ ಬಿಡುವುದೆಂದು ಸಭೆ ನಿರ್ಣಯಿಸಿತು.

೧೮೫.೩೧. ವಿದ್ಯಾರ್ಥಿಗಳು ಯುಜಿಸಿ ಶಿಷ್ಯವೇತನ ಪಾವತಿಕೋರಿ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ವಿದ್ಯಾರ್ಥಿಗಳು ಯುಜಿಸಿ ಶಿಷ್ಯವೇತನ ಪಾವತಿಕೋರಿ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿದ ಸಭೆಯು ವಿ.ವಿಯ ಆರ್ಥಿಕ ಅನುದಾನವನ್ನು ಅನುಲಕ್ಷಿಸಿ ಆದ್ಯತೆಯ ಮೇರೆಗೆ ಸಂಬಂಧಿಸಿದ ಯು.ಜಿ.ಸಿ ಶಿಷ್ಯವೇತನ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಶಿಷ್ಯವೇತನ ಪಾವತಿಸಲು ಸಭೆ ಒಪ್ಪಿಗೆ ನೀಡಿತು.

೧೮೫.೩೨. ಶಿವಶರಣಪ್ಪ ತೋಟಮಾಲಿ ಮತ್ತು ಯಂಕಪ್ಪ ಜವಾನ ಇವರ ಗೈರುಹಾಜರಿಯ ವಿಚಾರಣೆ ವರದಿಯ ಕುರಿತು.

ನಿರ್ಣಯ : ಶಿವಶರಣಪ್ಪ ತೋಟಮಾಲಿ ಮತ್ತು ಯಂಕಪ್ಪ ಜವಾನ ಇವರ ಗೈರುಹಾಜರಿಯ ವಿಚಾರಣೆ ವರದಿಯ ಕುರಿತು ಪರಿಶೀಲಿಸಿದ ಸಮಿತಿ ಸಭೆಯು ಸದರಿ ಸಿಬ್ಬಂದಿಗಳ ಕರ್ತವ್ಯ ಲೋಪ ಮತ್ತು ಅನಧಿಕೃತ ಗೈರುಹಾಜರಿಯನ್ನು ಗಂಭೀರವಾಗಿ ಪರಿಗಣಿಸಿತು. ಈ ಹಿನ್ನೆಲೆಯಲ್ಲಿ ಸದರಿ ಸಬ್ಬಂದಿಗಳ ಎರಡು ವಾರ್ಷಿಕ ವೇತನ ಬಡ್ತಿಯನ್ನು ಹಿಂಪಡೆದು ಅದರಿಂದ ಉದ್ಭವವಾಗುವ ಯಾವುದೇ ಪರಿಣಾಮಗಳಿಗೆ ಅವರನ್ನೇ ಹೊಣೆಯಾಗಿಸುವುದು ಎಂದು ಸಭೆ ನಿರ್ಣಯಿಸಿತು. ಇನ್ನು ಮುಂದೆ ಇದೇ ರೀತಿಯಲ್ಲಿ ನಡವಳಿಕೆ ಪುನರಾವರ್ತನೆಯಾದಲ್ಲಿ ಇವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಸದರಿ ಸಿಬ್ಬಂದಿಯಿಂದ ಮುಚ್ಚಳಿಕೆ ಪಡೆದು ಕ್ರಮವಹಿಸಲು ಸಭೆ ಸೂಚಿಸಿತು.

೧೮೫.೩೩. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನದಲ್ಲಿ ಪೀಠೋಪಕರಣ ಖರೀದಿಸಿ ನೀಡಿದ ಬಿಲ್ಲುಗಳ ಪಾವತಿಸಿದಕ್ಕೆ ಅನುಮೋದನೆ ಕೋರಿದೆ.

ನಿರ್ಣಯ : ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನದಲ್ಲಿ ಪೀಠೋಪಕರಣ ಖರೀದಿಸಿ ನೀಡಿದ ಬಿಲ್ಲುಗಳ ಪಾವತಿಸಿದಕ್ಕೆ ಸಭೆ ಘಟನೋತ್ತರ ಅನುಮೋದನೆ ನೀಡಿತು. ಮತ್ತು ಹಾಸಿಗೆ ಮತ್ತಿತರ ಪೀಠೋಪಕರಣಗಳಿಗೆ ಸಂಬಂಧಿಸಿ ತಡೆಹಿಡಿದಿರುವ ಮೊತ್ತ ಪಾವತಿಗೆ ಮುನ್ನ ನಿಗದಿತ ಗರಿಷ್ಠ ಬೆಲೆಗಿಂತ ಹೆಚ್ಚಿನ ಮೊತ್ತವನ್ನು ಕಡಿತಗೊಳಿಸಿ ಪಾವತಿಸಲು ಸಭೆ ಸೂಚಿಸಿತು. ಈ ಸರಬರಾಜುದಾರರನ್ನು ಇನ್ನು ಮುಂದೆ ಯಾವುದೇ ಖರೀದಿಗೆ ಪರಿಗಣಿಸದೆ ಕಪ್ಪು ಪಟ್ಟಿಯಲ್ಲಿಡಲು ಮತ್ತು ಈ ಸರಬರಾಜಾದ ವಸ್ತುಗಳ ಗುಣಮಟ್ಟವನ್ನು ಪರಿಶೀಲಿಸದೆ ಪಾವತಿಗೆ ಮಂಡಿಸಿದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲು ಸಭೆ ನಿರ್ಣಯಿಸಿತು.

೧೮೫.೩೪. ೩೭೧(ಜೆ) ಕುರಿತು ಅಧಿಸೂಚನೆ ಹೊರಡಿಸಿದ್ದು ಸರ್ಕಾರಕ್ಕೆ ಮಾಹಿತಿ ನೀಡುವ ಬಗ್ಗೆ.

ನಿರ್ಣಯ : ೩೭೧(ಜೆ) ಕನ್ನಡ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವ ಬಗೆಗೆ ಸರ್ಕಾರದ ಅಧಿಸೂಚನೆ ಮತ್ತು ಮೌಖಿಕ ನಿರ್ದೇಶನದಲ್ಲಿ ಇರುವ ಗೊಂದಲಕ್ಕೆ ಪರಿಹಾರಕ್ಕಾಗಿ ವಿಶ್ವವಿದ್ಯಾಲಯ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಪತ್ರಕ್ಕೆ ಉತ್ತರವಾಗಿ ಸರ್ಕಾರವೇ ಲಿಖಿತವಾಗಿ ೩೭೧(ಜೆ) ಅನ್ವಯ ಕುರಿತಂತೆ ಸೂಚಿಸಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಮಾಹಿತಿ ನೀಡಬಹುದೆಂದು ಸಭೆ ಒಪ್ಪಿಗೆ ನೀಡಿತು.

೧೮೫.೩೫. ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುವ ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು.

ನಿರ್ಣಯ : ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುವ ಪಠ್ಯಕ್ರಮಗಳನ್ನು ಸಭೆ ಪರಿಶೀಲಿಸಿ ಇವುಗಳ ಇಂಗ್ಲಿಶ್ ಅನುವಾದಗಳನ್ನು ಸಲ್ಲಿಸಿ ನಿಯಮಾನುಸಾರ ಅನುಶಾಸನ ರಚಿಸಿ ಕ್ರಮವಹಿಸಿಲು ಅನುಮೋದನೆ ನೀಡಿತು.

೧೮೫.೩೬. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇದರ ನಿರ್ದೇಶಕರು ಪತ್ರ ಬರೆದು ಪಂಚಾಯತ್‌ರಾಜ್ ಸ್ಟಡೀಸ್ ಡಿಪ್ಲೊಮಾ ಕೋರ್ಸ್‌ಗೆ ೨೦೧೧-೧೨ನೇ ಸಾಲಿನಲ್ಲಿ ನೀಡಿದ ಅನುದಾನವನ್ನು ಬಡ್ಡಿಯೊಂದಿಗೆ ಹಿಂದಿರುಗಿಸಲು ಕೋರಿರುವ ಪತ್ರದ ಕುರಿತು.

ನಿರ್ಣಯ : ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇದರ ನಿರ್ದೇಶಕರು ಪತ್ರ ಬರೆದು ಪಂಚಾಯತ್‌ರಾಜ್ ಸ್ಟಡೀಸ್ ಡಿಪ್ಲೊಮಾ ಕೋರ್ಸ್‌ಗೆ ೨೦೧೧-೧೨ನೇ ಸಾಲಿನಲ್ಲಿ ನೀಡಿದ ಅನುದಾನವನ್ನು ಬಡ್ಡಿಯೊಂದಿಗೆ ಹಿಂದಿರುಗಿಸಲು ಕೋರಿರುವ ಪತ್ರವನ್ನು ಪರಿಶೀಲಿಸಿದ ಸಭೆಯು ೧೮೫.೩೦ರಲ್ಲಿ ನಿರ್ಣಯದಂತೆ ಅದೇ ತಜ್ಞರ ಸಮಿತಿಯಲ್ಲಿ ಈ ವಿಷಯ ಕುರಿತು ಚರ್ಚಿಸಿ ಸಮಿತಿ ನೀಡುವ ಶಿಫಾರಸ್ಸಿನ ಅನ್ವಯ ಕ್ರಮವಹಿಸಬಹುದೆಂದು ಸಭೆ ತೀರ್ಮಾನಿಸಿತು.

೧೮೫.೩೭. ತಡೆಹಿಡಿದಿರುವ ಇಂಕ್ರಿಮೆಂಟ್ ಮಂಜೂರಾತಿ ಕೋರಿರುವ ಅಧ್ಯಾಪಕರ ಮನವಿ ಕುರಿತು ನಿರ್ದೇಶನ ಕೋರಿ.

ನಿರ್ಣಯ : ತಡೆಹಿಡಿದಿರುವ ಇಂಕ್ರಿಮೆಂಟ್ ಮಂಜೂರಾತಿ ಕೋರಿರುವ ಅಧ್ಯಾಪಕರ ಮನವಿ ಕುರಿತು ಚರ್ಚಿಸಿದ ಸಭೆಯು ೧೮೫.೩೦ರಲ್ಲಿ ನಿರ್ಣಯದಂತೆ ಅದೇ ತಜ್ಞರ ಸಮಿತಿಯಲ್ಲಿ ಈ ವಿಷಯ ಕುರಿತು ಚರ್ಚಿಸಿ ಸಮಿತಿ ನೀಡುವ ಶಿಫಾರಸ್ಸಿನ ಅನ್ವಯ ಕ್ರಮವಹಿಸಬಹುದೆಂದು ಸಭೆ ತೀರ್ಮಾನಿಸಿತು.

೧೮೫.೩೮. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ವಿಶೇಷ ಘಟಕದಲ್ಲಿ ಗ್ರಂಥಾಲಯದ ಪುಸ್ತಕಗಳು ಹಾಳಾಗಿರುವ ಬಗ್ಗೆ ಘಟಕದ ಸಂಯೋಜನಾಧಿಕಾರಿಗಳು ನೀಡಿರುವ ಮಾಹಿತಿ ಕುರಿತು.

ನಿರ್ಣಯ : ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ವಿಶೇಷ ಘಟಕದಲ್ಲಿ ಗ್ರಂಥಾಲಯದ ಪುಸ್ತಕಗಳು ಹಾಳಾಗಿರುವ ಬಗ್ಗೆ ಘಟಕದ ಸಂಯೋಜನಾಧಿಕಾರಿಗಳು ನೀಡಿರುವ ಮಾಹಿತಿ ಕುರಿತಂತೆ ಸಭೆ ಕೂಲಂಕಶವಾಗಿ ಚರ್ಚಿಸಿ ತೀರ್ಮಾನ ಕೈಗೊಂಡಿತು. ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕದ ಗ್ರಂಥಾಲಯಕ್ಕೆ ಖರೀದಿಸಿದ ಪುಸ್ತಕಗಳು ಬಳಸದೇ

ಹಾಳಾಗಿರುವುದನ್ನು ಸಭೆ ಗಂಭೀರವಾಗಿ ಆಕ್ಷೇಪಿಸಿ ಇದಕ್ಕೆ ಸಂಬಂಧಿಸಿದ ಯಾವುದೇ ವಿಭಾಗ, ಘಟಕಗಳಲ್ಲಿರುವ ಗ್ರಂಥಾಲಯವನ್ನು ಆಯಾ ಘಟಕದ, ವಿಭಾಗಗಳ ಮುಖ್ಯಸ್ಥರ ಜವಬ್ದಾರಿಯಾಗಿರುತ್ತದೆ. ಪುಸ್ತಕ ಹಾಳಾಗಿರುವುದಕ್ಕೆ ಘಟಕದ ಮುಖ್ಯಸ್ಥರಿಂದ ಸೂಕ್ತ ವಿವರಣೆ ಪಡೆಯಲು ಸಭೆ ಸೂಚಿಸಿತು. ಇನ್ನು ಮುಂದೆ ಯಾವುದೇ ವಿಭಾಗ, ಘಟಕಗಳಲ್ಲಿನ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಹಾಳಾಗದಂತೆ ಎಚ್ಚರ ವಹಿಸಬೇಕೆಂದು ಸುತ್ತೋಲೆ ಹೊರಡಿಸುವುದು ಎಂದು ಸಭೆ ಸೂಚಿಸಿತು.

೧೮೫.೩೯. ವಿಶ್ವವಿದ್ಯಾಲಯದ ತಾಂತ್ರಿಕ ಹುದ್ದೆಗಳಾದ ಟೆಲಿಫೋನ್ ಆಪ್‌ರೇಟರ್ ಮತ್ತು ಕಾರ್ಪೆಂಟರ್ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ ೩೧ ಎಸ್‌ಆರ್‌ಪಿ ೨೦೦೭ (II) ದಿನಾಂಕ ೧೪.೦೮.೨೦೦೮ರಂತೆ ವಾಹನ ಭತ್ಯೆ ಕೋರಿ ಮನವಿ ಸಲ್ಲಿಸಿರುವ ಬಗ್ಗೆ.

ನಿರ್ಣಯ : ವಿಶ್ವವಿದ್ಯಾಲಯದ ತಾಂತ್ರಿಕ ಹುದ್ದೆಗಳಾದ ಟೆಲಿಫೋನ್ ಆಪ್‌ರೇಟರ್ ಮತ್ತು ಕಾರ್ಪೆಂಟರ್ ಅದೇ ಸ್ವರೂಪದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ ೩೧ ಎಸ್‌ಆರ್‌ಪಿ ೨೦೦೭ (II) ದಿನಾಂಕ ೧೪.೦೮.೨೦೦೮ರಂತೆ ವಾಹನ ಭತ್ಯೆ ಕೋರಿ ಮನವಿ ಸಲ್ಲಿಸಿರುವುದನ್ನು ಪರಿಶೀಲಿಸಿದ ಸಭೆ ಸರ್ಕಾರದ ಆದೇಶದನ್ವಯ ಮನವಿಯನ್ನು ಪರಿಗಣಿಸಬಹುದೆಂದು ಸಭೆ ನಿರ್ಣಯಿಸಿತು.

೧೮೫.೪೦. ವಿಶ್ವವಿದ್ಯಾಲಯದ ಬೆಳ್ಳಿಹಬ್ಬದಾಚರಣೆಯ ಹೊಸ್ತಿಲಲ್ಲಿರುವುದರಿಂದ ಅದಕ್ಕೆ ಸಂಬಂಧಿಸಿ ಕ್ರಿಯಾಯೋಜನೆ ರೂಪಿಸುವ ಕುರಿತು ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದ ಬೆಳ್ಳಿಹಬ್ಬದಾಚರಣೆಯ ಹೊಸ್ತಿಲಲ್ಲಿರುವುದರಿಂದ ಅದಕ್ಕೆ ಸಂಬಂಧಿಸಿ ಕ್ರಿಯಾಯೋಜನೆ ರೂಪಿಸಲು ಸಭೆ ಅನುಮೋದನೆ ನೀಡಿತು. ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲು ಸಭೆ ಸೂಚಿಸಿತು.

೧೮೫.೪೧. ಹಂಸಲೇಖಾ ಅವರ ದೇಸೀ ವಿದ್ಯಾಸಂಸ್ಥೆಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ಹಂಸಲೇಖಾ ದೇಸಿ ವಿದ್ಯಾಸಂಸ್ಥೆಗೆ ಮಾನ್ಯತೆ ನೀಡಲು ಸಭೆ ತಾತ್ವಿಕವಾಗಿ ಅನುಮೋದನೆ ನೀಡಿತು. ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ನಿಯಮಗಳನ್ವಯ ವಿದ್ಯಾಸಂಸ್ಥೆ ಕನ್ನಡ ವಿ.ವಿ. ನಿಗದಿ ಪಡಿಸಿದ ಮತ್ತು ಅನುಮತಿ ನೀಡಿದ ಕೋರ್ಸುಗಳನ್ನು ನಡೆಸಬಹುದೆಂದು ಸಭೆ ಸೂಚಿಸಿತು.

೧೮೫.೪೨. ಕಿಯೋನಿಕ್ಸ್ ಸಂಸ್ಥೆಯಿಂದ ನಿಯಮಾನುಸಾರ ಖರೀದಿಸಿದ ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಪ್ರಿಂಟರ್ ಮುಂತಾದವುಗಳಿಗೆ ಬಿಲ್ಲು ಪಾವತಿಸಿದ್ದಕ್ಕೆ ಅನುಮೋದನೆ ಕೋರಿದೆ.

ನಿರ್ಣಯ : ಕಿಯೋನಿಕ್ಸ್ ಸಂಸ್ಥೆಯಿಂದ ನಿಯಮಾನುಸಾರ ಖರೀದಿಸಿದ ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರೊಜೆಕ್ಟರ್ ಮತ್ತು ಪ್ರಿಂಟರ್ ಮುಂತಾದವುಗಳಿಗೆ ಬಿಲ್ಲು ಪಾವತಿಸಿದ್ದಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೫.೪೩. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕ್ರೆಡಿಲ್) ಸಂಸ್ಥೆಯವರಿಗೆ ವಿವಿಧ ಕಾಮಗಾರಿಗಳಿಗೆ ನಿಯಮಾನುಸಾರ ನೀಡಿದ ಮುಂಗಡ ಹಣ ಪಾವತಿಗೆ ಅನುಮೋದನೆ ಕೋರಿದೆ.

ನಿರ್ಣಯ : ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕ್ರೆಡಿಲ್) ಸಂಸ್ಥೆಯವರಿಗೆ ವಿವಿಧ ಕಾಮಗಾರಿಗಳಿಗೆ ಶರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ತಾಂತ್ರಿಕ ವಿಭಾಗದ ಶಿಫಾರಸ್ಸನ್ನು ಆಧರಿಸಿ ನಿಯಮಾನುಸಾರ ಮುಂಗಡ ಹಣ ಪಾವತಿ ಮಾಡಲು ಸಭೆ ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೧೮೫.೪೪. ಡಾ.ಎಸ್.ಸಿ. ಪಾಟೀಲ, ವಿಶೇಷಾಧಿಕಾರಿಗಳು, ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ ಇವರು ಕನ್ನಡ ವಿಶ್ವವಿದ್ಯಾಲಯದಿಂದ ಶಿಕ್ಷಣ ಇಲಾಖೆಯ ಆದೇಶದ ಮೇರೆಗೆ ನಿಯೋಜನೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಇವರು ಮಾತೃಸಂಸ್ಥೆಯಾದ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಇಚ್ಚಿಸಿದ್ದು ವಾರದಲ್ಲಿ ನಾಲ್ಕು ದಿನಗಳ ಕಾಲ ಕನ್ನಡ ವಿಶ್ವವಿದ್ಯಾಲಯದಲ್ಲಿ ಇನ್ನುಳಿದ ಎರಡು ದಿನಗಳು ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿದ್ದಾರೆ.

ನಿರ್ಣಯ : ಡಾ. ಎಸ್.ಸಿ. ಪಾಟೀಲ, ವಿಶೇಷಾಧಿಕಾರಿಗಳು, ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ ಇವರು ಕನ್ನಡ ವಿಶ್ವವಿದ್ಯಾಲಯದಿಂದ ಶಿಕ್ಷಣ ಇಲಾಖೆಯ ಆದೇಶದ ಮೇರೆಗೆ ನಿಯೋಜನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಖಾಯಂ ಬೋಧಕ ಸಿಬ್ಬಂದಿ ಇರದ ಕಾರಣ ಡಾ.ಎಸ್.ಸಿ.ಪಾಟೀಲ ಅವರ ಮನವಿಗೆ ಸಭೆ ಒಪ್ಪಿಗೆ ನೀಡಿತು. ಡಾ.ಎಸ್.ಸಿ.ಪಾಟೀಲ್ ಅವರು ಸರ್ಕಾರದ ಶಿಕ್ಷಣ ಇಲಾಖೆಯ ಆದೇಶದನ್ವಯ ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾಗಿ ನಿಯೋಜನೆಗೊಂಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರವೇ ಅವರಿಗೆ ವೇತನ ಇತರೆ ಭತ್ಯೆಗಳನ್ನು ನೀಡುತ್ತದೆ. ಸದರಿ ಸಿಬ್ಬಂದಿ ಪೂರ್ಣಪ್ರಮಾಣದಲ್ಲಿ ನಿಯೋಜನೆಗೊಂಡಿರುತ್ತಾರೆ. ನಾಲ್ಕು ದಿನಗಳ ಕಾಲ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವುದು ಮತ್ತು ಈ ಸಂದರ್ಭದಲ್ಲಿ ಅವರು ಪಡೆಯುವ ವೇತನ, ಇತರೆ ಭತ್ಯೆಗಳನ್ನು

ಯಾರು ನೀಡಬೇಕು ಎನ್ನುವ ಹಿನ್ನೆಲೆಯಲ್ಲಿ ಆಗುವ ಆಡಳಿತಾತ್ಮಕ ಗೊಂದಲಗಳನ್ನು ಪರಿಹರಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಲು ಸಭೆ ಸೂಚಿಸಿತು.

೧೮೫.೪೫. ಸಂಗೀತ ಮತ್ತು ನೃತ್ಯ ವಿಭಾಗದ ಬಿ.ಮ್ಯೂಜಿಕ್ ಮತ್ತು ಎಂ.ಮ್ಯೂಜಿಕ್ ಪಠ್ಯಕ್ರಮ ನಿಯಮಾವಳಿ

ನಿರ್ಣಯ : ಸಂಗೀತ ಮತ್ತು ನೃತ್ಯ ವಿಭಾಗದ ಬಿ.ಮ್ಯೂಜಿಕ್ ಮತ್ತು ಎಂ.ಮ್ಯೂಜಿಕ್ ಪಠ್ಯಕ್ರಮ ನಿಯಮಾವಳಿಯನ್ನು ಅಗತ್ಯ ತಿದ್ದುಪಡಿಗಳೊಂದಿಗೆ ಜಾರಿಗೊಳಿಸಲು ಸಭೆ ಅನುಮತಿಸಿತು.

೧೮೫.೪೬. ದಿನಾಂಕ: ೮.೮.೨೦೧೬ರಂದು ನಡೆದ ಆಂತರಿಕ ಗುಣಮಟ್ಟ ಭರವಸೆ ಕೋಶದ(ಐಕ್ಯೂಎಸಿ) ಪದಾಧಿಕಾರಿ ಮಂಡಳಿ ಸಭೆಯ ನಡವಳಿಗಳಿಗೆ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೮.೮.೨೦೧೬ರಂದು ನಡೆದ ಆಂತರಿಕ ಗುಣಮಟ್ಟ ಭರವಸೆ ಕೋಶದ(ಐಕ್ಯೂಎಸಿ) ಪದಾಧಿಕಾರಿ ಮಂಡಳಿ ನಡವಳಿಗಳ ಸ್ಥಿರೀಕರಣಕ್ಕೆ ಸಭೆ ಒಪ್ಪಿಗೆ ಸೂಚಿಸಿತು.

೧೮೫.೪೭. ದಿನಾಂಕ: ೧೮ ಮತ್ತು ೧೯.೦೭.೨೦೧೬ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆ ನಡವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೧೮ ಮತ್ತು ೧೯.೦೭.೨೦೧೬ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆ ನಡವಳಿಗಳ ಸ್ಥಿರೀಕರಣಕ್ಕೆ ಸಭೆ ಒಪ್ಪಿಗೆ ಸೂಚಿಸಿತು.

೧೮೫.೪೮. ದಿನಾಂಕ: ೦೮.೦೮.೨೦೧೬ರಂದು ನಡೆದ ಕಟ್ಟಡ ಸಲಹಾ ಸಮಿತಿ ಸಭೆ ನಡವಳಿಗಳ ಸ್ಥಿರೀಕರಣ ಕೋರಿ.

ನಿರ್ಣಯ : ದಿನಾಂಕ: ೦೮.೦೮.೨೦೧೬ರಂದು ನಡೆದ ಕಟ್ಟಡ ಸಲಹಾ ಸಮಿತಿ ಸಭೆ ನಡವಳಿಗಳ ಸ್ಥಿರೀಕರಣಕ್ಕೆ ಸಭೆ ಒಪ್ಪಿಗೆ ಸೂಚಿಸಿತು.

೧೮೫.೪೯. ಭುವನವಿಜಯ ಮತ್ತು ಮಂಟಪ ಸಭಾಂಗಣದ ಧ್ವನಿ ಮತ್ತು ಬೆಳಕು ನಿರ್ವಹಣೆಗಾಗಿ ಒಬ್ಬ ತಾಂತ್ರಿಕ ಸಹಾಯಕರೊಬ್ಬರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಬಗ್ಗೆ.

ನಿರ್ಣಯ : ಭುವನವಿಜಯ ಮತ್ತು ಮಂಟಪ ಸಭಾಂಗಣದ ಧ್ವನಿ ಮತ್ತು ಬೆಳಕು ನಿರ್ವಹಣೆಗಾಗಿ ಒಬ್ಬ ತಾಂತ್ರಿಕ ಸಹಾಯಕರೊಬ್ಬರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಬಗ್ಗೆ ಕೋರಿದ ಮನವಿಯನ್ನು ಪರಿಶೀಲಿಸಿದ ಸಭೆಯು ಇದರ ಜೊತೆಗೆ ಹಣಕಾಸು ವಿಭಾಗ ಮತ್ತು ಬದಾಮಿ ಕೇಂದ್ರಕ್ಕೆ ಡಿ.ಟಿ.ಪಿ ಆಪರೇಟರ್‌ಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಸಭೆ ಅನುಮತಿ ನೀಡಿತು.

೧೮೫.೫೦. ಕನ್ನಡ ವಿಶ್ವವಿದ್ಯಾಯದ ೨೦೧೫-೧೬ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಸಿದ್ಧಪಡಿಸಲಾಗಿದೆ. ಸದರಿ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಯದ ೨೦೧೫-೧೬ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಸಭೆಯು ಪರಿಶೀಲಿಸಿ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

೧೮೫.೫೧. ಕಾರ್ಯಕಾರಿ ಸಮಿತಿ ಸಭೆಗೆ ಆಗಮಿಸುವ ಸದಸ್ಯರಿಗೆ ಸಭಾ ಭತ್ಯೆ ರೂ.೧೦೦೦/-ಮಾತ್ರ ಗಳನ್ನು ಈವರೆಗೆ ನೀಡಲಾಗುತ್ತಿದೆ. ಈ ಸಭಾ ಭತ್ಯೆಯನು ್ನಹೆಚ್ಚಿಸುವ ಕುರಿತು ಸಭೆಯ ನಿರ್ದೇಶನ ಕೋರಿದೆ.

ನಿರ್ಣಯ : ಕಾರ್ಯಕಾರಿ ಸಮಿತಿ ಸದಸ್ಯರಿಗೆ ಪ್ರಸ್ತುತ (೧೮೫ನೇ)ಸಭೆಯಿಂದಲೇ ಜಾರಿಗೆ ಬರುವಂತೆ ರೂ.೧೦೦೦/- ಗಳಿಂದ ರೂ.೨೦೦೦/- ಗಳಿಗೆ ಹೆಚ್ಚಿಸಲು ಸಭೆ ನಿರ್ಣಯಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

(ಪದನಿಮಿತ್ತ ಕಾರ್ಯದರ್ಶಿ)

ಕುಲಪತಿಗಳು

(ಅಧ್ಯಕ್ಷರು)